# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/2122/2021
ಮಂಡನಾಧಿಕಾರಿಗಳ ಶಾಖೆ, ಎಆರ್‌ಇ-18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 03/03/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ ನಂಜೇಗೌಡ ಬಿನ್ ಲೇಟ್ ಅರಿವೇಗೌಡ, ಸಹಾಯಕ ತೋಟಗಾರಿಕೆ ಅಧಿಕಾರಿ, ಕೂಡ್ಲಿಗೆರೆ ಹೋಬಳಿ, ಭದ್ರಾವತಿ, ಶಿವಮೊಗ್ಗ ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

*****

1. ಶಿವಮೊಗ್ಗ ಜಿಲ್ಲೆ, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ ನಂಜೇಗೌಡ ಬಿನ್ ಲೇಟ್ ಅರಿವೇಗೌಡ, ಸಹಾಯಕ ತೋಟಗಾರಿಕೆ ಅಧಿಕಾರಿ, ಕೂಡ್ಲಿಗೆರೆ ಹೋಬಳಿ, ಭದ್ರಾವತಿ, ಶಿವಮೊಗ್ಗ ಜಿಲ್ಲೆ ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, (ಇನ್ನು ಮುಂದೆ 'ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಶ್ರೀ ಎ.ಎಸ್. ಭಾಗ್ಯರಾಜ್ @ ನವೀನ ಬಿನ್ ಹೆಚ್ ಸಿ.ಸೀತಾರಾಮ್, ವಾಸ: ಅಂತರಗಂಗೆ ಗ್ರಾಮ (ಪೋಸ್ಟ್), ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರಾದ ನಿಮ್ಮನ್ನು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ದುರ್ನಡತೆ ತೋರಿಸಿರುತ್ತೀರಿ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿದಾಗ, ಎದುರುದಾರರಾದ ನೀವು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ತನಿಖೆ ಕೈಗೊಂಡಿರುತ್ತಾರೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ:**– ದೂರುದಾರರ ತಾಯಿಯಾದ ಸುಶೀಲಮ್ಮರವರ ಹೆಸರಿನಲ್ಲಿ ಸರ್ವೆ ನಂ. 39, 39/2ಪಿ ರಲ್ಲಿನ 1 ಎಕರೆ 30 ಗುಂಟೆ ಜಮೀನಿನಲ್ಲಿರುವ ಅಡಿಕೆ ಮತ್ತು ತೆಂಗಿನ ತೋಟಕ್ಕೆ ಸ್ಪ್ರಿಂಕ್ಲರ್ ಅಳವಡಿಸಿ ತುಂತುರು ನೀರಾವರಿ ಮಾಡುವ ಉದ್ದೇಶದಿಂದ 2018 ಫೆಬ್ರುವರಿ ತಿಂಗಳಲ್ಲಿ ತೋಟಗಾರಿಕೆ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ನಂತರ ಒಂದು ವಾರದ ಮೇಲೆ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿ ಮಾರ್ಚ್ ತಿಂಗಳಿನಲ್ಲಿ ಎಲ್ಲಾ ಕೆಲಸವನ್ನು ಮುಗಿಸಿರುತ್ತಾರೆ. ಕೂಡ್ಲಿಗೆರೆ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಜಮೀನಿಗೆ ಬಂದು ಸ್ಥಳ ಪರಿಶೀಲನೆ ಮಾಡಿ ಹೋಗಿರುತ್ತಾರೆ. ನಂತರ ದಿ: 08/08/2018 ರಂದು ದೂರುದಾರರ ಸ್ನೇಹಿತನಾದ ಶಿವಾನಂದ ಬಿ.ಆರ್. ರವರು ಫೋನ್ ಮಾಡಿ ನಿಮಗೆ ತೋಟಗಾರಿಕೆ ಇಲಾಖೆಯಿಂದ ಸಬ್ಸಿಡಿ ಹಣ ರೂ. 24,050/– ಮಂಜೂರಾಗಿರುತ್ತದೆ ಮತ್ತು ಸದರಿ ಸಬ್ಸಿಡಿ ಹಣ ಪಡೆಯಲು 10% ಹಣ ಅವರಿಗೆ ಕೊಡಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ. ಅದೇ ದಿನ ದಿ: 08/08/2018ರಂದು ತೋಟಗಾರಿಕೆ ಇಲಾಖೆಯ ಅಧಿಕಾರಿಯಾದ ಎದುರುದಾರರನ್ನು ದೂರುದಾರರು ಫೋನ್ ಮಾಡಿ ವಿಚಾರಿಸಿದಾಗ ಎದುರುದಾರರು ದೂರುದಾರರಿಗೆ ನಾಳೆ ಬೆಳಿಗ್ಗೆ 10–00 ಘಂಟೆಗೆ ಬರಲು ತಿಳಿಸಿರುತ್ತಾರೆ. ದಿ: 09/08/2018 ರಂದು ಮಧ್ಯಾಹ್ನ ದೂರುದಾರರು ತಮ್ಮ ಮೊಬೈಲ್ ನಂ. 9380381142 ರಿಂದ ಎದುರುದಾರರ ಮೊಬೈಲ್ ನಂ. 9900659131ಗೆ ಕರೆ ಮಾಡಿದಾಗ ಎದುರುದಾರರ ಪಾಸ್ ಬುಕ್ಕಿನ ಜೆರಾಕ್ಸ್ ಮತ್ತು 3,000/– ರೂ. ಲಂಚದ ಹಣವನ್ನು ತೆಗೆದುಕೊಂಡು ಬರುವಂತೆ ತಿಳಿಸಿರುತ್ತಾರೆ. ಈ ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

3. ದೂರುದಾರರಿಗೆ ಲಂಚದ ಹಣ ಕೊಟ್ಟು ಸರಕಾರದಿಂದ ಮಂಜೂರಾಗಿರುವ ಸಬ್ಸಿಡಿ ಹಣವನ್ನು ಲಂಚ ನೀಡಿ ಮಂಜೂರು ಮಾಡಿಸಿಕೊಳ್ಳಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 10/08/2018 ರಂದು ಬೆಳಿಗ್ಗೆ 10–45 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ಶಿವಮೊಗ್ಗ ಜಿಲ್ಲೆ ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರು ನೀಡಿದಾಗ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 11/2018 ಪಿ.ಸಿ. ಕಾಯಿದೆ ಕಲಂ 7(ಎ) ರಡಿ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

4. ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಶ್ರೀ ಪ್ರಕಾಶ ಎಸ್.ಆರ್. ಬಿನ್ ಎಸ್ ರಾಮಕೃಷ್ಣ ಮತ್ತು ಶ್ರೀ ಮಂಜುನಾಥ ಬಿನ್ ರಂಗಯ್ಯ ಇವರನ್ನು ಬರಮಾಡಿಕೊಂಡಿದ್ದು, ಅವರುಗಳ ಪರಿಚಯಮಾಡಿಕೊಂಡು ದೂರುದಾರರನ್ನು ಪರಿಚಯಿಸಿ ದೂರುದಾರರು ನೀಡಿದ ದೂರನ್ನು ಪಂಚರಿಗೆ ಓದಿ ಹೇಳಿರುತ್ತಾರೆ. ಆ ನಂತರ ತನಿಖಾಧಿಕಾರಿಯವರ ಸೂಚನೆ ಮೇರೆಗೆ ಎದುರುದಾರರು ಲಂಚವನ್ನು ಕೇಳಿರುವುದಕ್ಕೆ ಸಂಬಂಧಿಸಿರುವ ವಾಯ್ಸ್ ರೆಕಾರ್ಡ ಆಗಿರುವ ಮೊಬೈಲ್‌ನ್ನು ದೂರುದಾರರು ಹಾಜರಪಡಿಸಿರುತ್ತಾರೆ. ದೂರುದಾರರ ಮೊಬೈಲ್‌ನಲ್ಲಿ ರೆಕಾರ್ಡ ಆಗಿರುವ ವಾಯ್ಸ್ ಕ್ಲಿಪಿಂಗ್‌ಗಳನ್ನು ತನಿಖಾಧಿಕಾರಿಗಳು ಡಾಟಾ ಕೇಬಲ್ ಮೂಲಕ ಕಂಪ್ಯೂಟರ್‌ಗೆ ಹಾಕಿಸಿ ಆನ್ ಮಾಡಿ ಪಂಚರಿಗೆ ಕೇಳಿಸಿ ಸಂಭಾಷಣೆಯನ್ನು ಕಂಪ್ಯೂಟರ್‌ನಲ್ಲಿ ಡೌನಲೋಡ್ ಮಾಡಿಕೊಂಡು ಎರಡು ಹೊಸ ಸಿಡಿಗಳಿಗೆ ವರ್ಗಾಯಿಸಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ಎದುರುದಾರರಿಗೆ ಲಂಚವಾಗಿ ಕೊಡಬೇಕೆಂದಿರುವ ರೂ. 3,000/–ಗಳನ್ನು ಹಾಜರಪಡಿಸುವಂತೆ ತಿಳಿಸಿದಾಗ ದೂರುದಾರರು ರೂ. 500/– ಮುಖಬೆಲೆಯ ಆರು ನೋಟುಗಳನ್ನು ಟೇಬಲ್ ಮೇಲೆ ಹಾಜರಪಡಿಸಿರುತ್ತಾರೆ. ಎದುರುದಾರರಿಗೆ ಲಂಚವಾಗಿ ಕೊಡಲು ತಂದಿರುವ ರೂ. 3,000/– ಗಳನ್ನು ಪಂಚರು ಪರಿಶೀಲಿಸಿ ಅವುಗಳ ಮೌಲ್ಯ ಮತ್ತು ಕ್ರಮ ಸಂಖ್ಯೆಗಳನ್ನು ಒಂದು ಬಿಳಿ ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರ ಸೂಚನೆ ಮೇರೆಗೆ ಪಂಚ–1 ರವರು ದೂರುದಾರರ ಅಂಗಶೋಧನೆ ಮಾಡಿ ಅವರ ಬಳಿ ಇದ್ದ ಎಫ್.ಐ.ಆರ್ ಪ್ರತಿ, ಡಿ.ಎಲ್, ಆಧಾರ್ ಕಾರ್ಡ್ ಮತ್ತು ಬ್ಯಾಂಕ್ ಪಾಸ್ ಬುಕ್ ಝುರಾಕ್ಸ್ ರೂ. 80/– ನಗದು ಹಣ ಮತ್ತು ಒಂದು ಮೊಬೈಲ್ ಗಳನ್ನು ದೂರುದಾರರ ವಶದಲ್ಲಿಯೇ ಬಿಟ್ಟಿರುತ್ತಾರೆ. ಆ ನಂತರ ತನಿಖಾಧಿಕಾರಿಗಳು ಸೂಚನೆ ಮೇರೆಗೆ ಅವರ ಕಛೇರಿಯ ಸಿಬ್ಬಂದಿಯವರು ದೂರುದಾರರು ಹಾಜರಪಡಿಸಿದ ನೋಟುಗಳಿಗೆ ಪ್ರತ್ಯೇಕವಾಗಿ ಫಿನಾಪ್ತಲಿನ್ ಪುಡಿಯನ್ನು ತೆಳುವಾಗಿ ಸವರಿದ ನಂತರ ಪಂಚ–1 ರವರು ಫಿನಾಪ್ತಲಿನ್ ಪುಡಿಯನ್ನು ಸವರಿದ ನೋಟುಗಳನ್ನು ತಮ್ಮ ಬಲಗೈಯಿಂದ ತೆಗೆದುಕೊಂಡು ಎರಡು ಕೈಗಳಿಂದ ಏಣಿಸಿ ಆ ನೋಟುಗಳನ್ನು ದೂರುದಾರರು ಧರಿಸಿದ್ದ ಶರ್ಟಿನ ಮುಂಭಾಗದ ಎಡಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ಪಂಚ–1 ರವರು ಸೋಡಿಯಂ ಕಾರ್ಬೋನೇಟ್

ದ್ರಾವಣದಲ್ಲಿ ತಮ್ಮ ಎರಡು ಕೈಗಳನ್ನು ಅದ್ದಿ ತೊಳೆದುಕೊಂಡಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಪಂಚ-1 ರವರು ತಮ್ಮ ಎರಡು ಕೈಗಳನ್ನು ಸೋಪು ಹಚ್ಚಿ ನೀರಿನಿಂದ ಶುಭ್ರವಾಗಿ ತೊಳೆದುಕೊಂಡಿರುತ್ತಾರೆ. ದೂರುದಾರರು ಎದುರುದಾರರನ್ನು ಭೇಟಿ ಮಾಡಿ ತಮ್ಮ ಜಮೀನಿನ ಅಡಿಕೆ ಮತ್ತು ತೆಂಗಿನ ತೋಟಕ್ಕೆ ಅಳವಡಿಸಿರುವ ಸ್ಪಿಂಕ್ಲರ್ ತುಂತುರು ನೀರಾವರಿ ಯೋಜನೆಗೆ ಸರ್ಕಾರದಿಂದ ಮಂಜೂರು ಆಗಿರುವ ಸಬ್ಸಿಡಿ ಹಣದ ಬಗ್ಗೆ ಕೇಳಬೇಕು ನಂತರ ಎದುರುದಾರರು ಲಂಚದ ಬಗ್ಗೆ ಪ್ರಸ್ತಾಪಿಸಿದರೆ ಅವರಿಗೆ ಫಿನಾಪ್ತಲಿನ್ ಪುಡಿಯನ್ನು ಸವರಿರುವ ನೋಟನ್ನು ಕೊಡಬೇಕು ಅವರು ಆ ನೋಟುಗಳನ್ನು ಸ್ವೀಕರಿಸಿದರೆ ಅಲ್ಲಿಂದ ಹೊರಗಡೆ ಬಂದು ಕೈಯಿಂದ ಮುಖವನ್ನು ಒರೆಸಿಕೊಳ್ಳುವ ಮೂಲಕ ಸಂಜ್ಞೆಯನ್ನು ನೀಡಬೇಕೆಂದು ತನಿಖಾಧಿಕಾರಿಗಳು ದೂರುದಾರರಿಗೆ ಸೂಚನೆ ನೀಡಿರುತ್ತಾರೆ. ಪಂಚ-2 ರವರಿಗೆ ಆ ಸಂದರ್ಭದಲ್ಲಿ ದೂರುದಾರರನ್ನು ಹಿಂಬಾಲಿಸಿಕೊಂಡು ಹೋಗಿ ದೂರುದಾರರು ಮತ್ತು ಎದುರುದಾರರ ನಡುವೆ ನಡೆಯುವ ಸಂಭಾಷಣೆಯನ್ನು ಕೇಳಿಸಿಕೊಂಡು ಮತ್ತು ವಿದ್ಯಾಮಾನಗಳನ್ನು ಗಮನಿಸಿ ನಂತರ ತಮಗೆ ವರದಿ ಮಾಡಬೇಕೆಂದು ಸೂಚನೆ ನೀಡಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ಎದುರುದಾರರನ್ನು ಭೇಟಿ ಮಾಡಲು ಹೋಗುವಾಗ ತಮ್ಮ ಮೊಬೈಲ್‌ನ್ನು ಆನ್ ಮಾಡಿಕೊಂಡು ಹೋಗಿ ರೆಕಾರ್ಡ್ ಮಾಡಲು ತಿಳಿಸಿರುತ್ತಾರೆ. ಆ ನಂತರ ಎಲ್ಲರೂ ಕೈಗಳನ್ನು ಸೋಪು ಮತ್ತು ನೀರಿನಿಂದ ಶುಭ್ರವಾಗಿ ತೊಳೆದುಕೊಂಡಿರುತ್ತಾರೆ. ಈ ನಡಾವಳಿಯ ಎಲ್ಲ ವಿದ್ಯಾಮಾನಗಳನ್ನು ತಮ್ಮ ಸಿಬ್ಬಂದಿಯವರಿಂದ ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿರುತ್ತಾರೆ. ವಹಿಸಿಕೊಡುವ ಪಂಚನಾಮೆಯನ್ನು ದಿ:10-08-2018 ರಂದು ಬೆಳ್ಳಿಗೆ 11.20 ಗಂಟೆಯಿಂದ ಮಧ್ಯಾಹ್ನ 12.20 ಗಂಟೆಯವರೆಗೆ ಶಿವಮೊಗ್ಗ ಎಸಿಬಿ ಕಛೇರಿಯ ಲ್ಯಾಪಟಾಪ್‌ನಲ್ಲಿ ಗಣಕೀಕರಣ ಮಾಡಿಸಿ ವಹಿಸಿಕೊಡುವ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

5. ತನಿಖಾಧಿಕಾರಿಗಳು ದಿ: 10/08/2018 ರಂದು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ಎರಡು ಸರಕಾರಿ ವಾಹನಗಳಲ್ಲಿ ಹೊರಟು ಭದ್ರಾವತಿ ನಗರದ ಗಾಂಧಿ ಸರ್ಕಲ್ ಬಳಿ ಮಧ್ಯಾಹ್ನ 1-00 ಘಂಟೆಗೆ ಬಂದು ವಾಹನಗಳನ್ನು ನಿಲ್ಲಿಸಿದ

ನಂತರ ಸುಮಾರು 1-10 ಘಂಟೆಗೆ ದೂರುದಾರರು ತಮ್ಮ ಮೊಬೈಲ್‌ನಿಂದ ಎದುರುದಾರರ ಮೊಬೈಲಿಗೆ ಕರೆ ಮಾಡಿದಾಗ ಎದುರುದಾರರು ತಾಲ್ಲೂಕು ಪಂಚಾಯ್ತಿ ಆಫೀಸಿನಲ್ಲಿ ಇರುವುದಾಗಿ ಹೇಳಿ ತಮ್ಮ ಕಛೇರಿಗೆ ಬರುವಂತೆ ತಿಳಿಸಿರುತ್ತಾರೆ. ಈ ವಿಷಯವನ್ನು ದೂರುದಾರರು ತನಿಖಾಧಿಕಾರಿಗಳಿಗೆ ಹೇಳಿದಾಗ ಅವರು ದೂರುದಾರರು ಹಾಗೂ ನೆರಳು ಸಾಕ್ಷಿಯಾದ ಮಂಜುನಾಥ ರವರನ್ನು ಜೀಪಿನಿಂದ ಇಳಿಸಿ ವಹಿಸುವಿಕೆ ಪಂಚನಾಮೆಯ ಸಮಯದಲ್ಲಿ ನೀಡಿದ ಸೂಚನೆ ಹಾಗೂ ತಿಳುವಳಿಕೆಗಳನ್ನು ಮತ್ತೊಮ್ಮೆ ನೆನಪಿಸಿ ನಿಮ್ಮನ್ನು ಭೇಟಿಯಾಗಲು ಕಳುಹಿಸಿಕೊಟ್ಟಿರುತ್ತಾರೆ. ಅವರಿಬ್ಬರೂ ನಡೆದುಕೊಂಡು ಭದ್ರಾವತಿ ತೋಟಗಾರಿಕೆ ಇಲಾಖೆಯ ಕಛೇರಿಯ ಬಳಿ ನಿಂತುಕೊಂಡಾಗ ಸ್ವಲ್ಪ ಸಮಯದ ನಂತರ ಎದುರುದಾರರು ಬೈಕ್‌ನಲ್ಲಿ ಬಂದು ಬೈಕ್ ನಿಲ್ಲಿಸಿ ಕಛೇರಿಯ ಒಳಗಡೆ ಹೋಗಿರುತ್ತಾರೆ. ಎದುರುದಾರರ ಹಿಂದೆಯೇ ಅವರಿಬ್ಬರೂ ಹೋಗಿರುತ್ತಾರೆ. ನೆರಳು ಸಾಕ್ಷಿರವರು ಕೊಠಡಿಯ ಬಾಗಿಲ ಬಳಿಯಲ್ಲಿಯೇ ನಿಂತುಕೊಂಡಾಗ ದೂರುದಾರರು ಕೊಠಡಿಯ ಒಳಗಡೆ ಹೋಗಿ ಎದುರುದಾರರಿಗೆ ನಮಸ್ಕಾರ ಸಾರ್ ಎಂದು ಹೇಳಿದಾಗ ಎದುರುದಾರರು ಬಾ ಕುಳಿತುಕೊ ಎಂದು ಹೇಳಿರುತ್ತಾರೆ. ಆಗ ದೂರುದಾರರು ಎದುರುದಾರರಿಗೆ "ಸಾರ್ ನಮ್ಮ ಸ್ಪ್ರಿಂಕ್ಲರ್ ಚೆಕ್ ಏನಾಯಿತು ಸಾರ್" ಎಂದು ಕೇಳಿದಾಗ ಎದುರುದಾರರು ಆಗಿದೆ, ಚೆಕ್ ಹುಡುಕುತ್ತಾ ಇದೀನಿ ಎಂದು ಬ್ಯಾಗ್‌ನಲ್ಲಿ ಹುಡುಕಿ ರೂ. 24,050/- ಗಳಿಗೆ ಆಗಿದೆ ಸಾಹೇಬ್ರ ಕಡೆ ನೋಡಬೇಕಲಾ, ಸಾಹೇಬ್ರು ಲಿಸ್ಟ್ ಮಾಡಿ ಕೊಟ್ಟಿದ್ದಾರೆ. ಲಿಸ್ಟ್ ಪ್ರಕಾರ ನಾವು ಇದನ್ನು ಮಾಡುತ್ತಿರುವುದು, ನಿಮ್ಮದು 2,400/- ರೂ. ಆಗುತ್ತೆ ಎಂದು ಹೇಳಿದಾಗ ದೂರುದಾರರು ತಮ್ಮ ಶರ್ಟಿನ ಮುಂಭಾಗದ ಎಡಭಾಗದ ಜೇಬಿನಿಂದ ಫಿನಾಪ್ತಲಿನ್ ಪುಡಿ ಲೇಪಿತ 3,000/- ರೂ. ಲಂಚದ ಹಣವನ್ನು ನೀಡಿದಾಗ ಎದುರುದಾರರು ತಮ್ಮ ಬಲಗೈನಿಂದ ಲಂಚದ ಹಣವನ್ನು ಪಡೆದುಕೊಂಡು ಎರಡೂ ಕೈಗಳಿಂದ ಎಣಿಸಿ ರೂ. 2,400/- ಆಗುತ್ತೆ, 500/- ರೂ. ತಗೋತೀನಿ, ನಿಮ್ದು ಕ್ಲೀಯರ್ ಆಯ್ತು ಅಂತ ಇಲ್ಲಿ ಬರೆದಿದ್ದೀನಿ, ಇನ್ನ 500/- ರೂ. ತಗೋ ಅಂತ ಹೇಳಿ ವಾಪಸ್ ಕೊಟ್ಟು ರೂ. 2,500/- ಗಳನ್ನು ತಮ್ಮ ಶರ್ಟಿನ ಮುಂಭಾಗದ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಆಗ ಸಮಯ ಸುಮಾರು ಮಧ್ಯಾಹ್ನ 2-15 ಘಂಟೆ ಆಗಿರುತ್ತದೆ. ನಂತರ ದೂರುದಾರರು ಕೊಠಡಿಯಿಂದ ಹೊರಗಡೆ ಬಂದು ತನಿಖಾಧಿಕಾರಿಯವರು

ವಹಿಸುವಿಕೆ ಪಂಚನಾಮೆಯ ಕಾಲಕ್ಕೆ ನೀಡಿದ ಸೂಚನೆಯಂತೆ ತನ್ನ ಕೈಯಿಂದ ಮುಖ ವರೆಸಿಕೊಳ್ಳುವುದರ ಮೂಲಕ ನಿಗದಿತ ಸಿಗ್ನಲ್ ನೀಡಿರುತ್ತಾರೆ. ಆಗ ತನಿಖಾಧಿಕಾರಿಯವರು ಅಲ್ಲಿಗೆ ಬಂದು ಲಂಚದ ಹಣದ ಸಮೇತ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಯವರು ಪಂಚರ ಸಮಕ್ಷಮ ಸದರಿ ಲಂಚದ ಹಣವಾದ 2,500/- ರೂ.ಗಳನ್ನು ಎದುರುದಾರರಿಂದ ಅಮಾನತ್ತುಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರ ಬಲಗೈಯನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಅದೇ ರೀತಿ ಎಡಗೈಯನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಗಳು ತಾವು ತಂದಿದ್ದ ಶರ್ಟನ್ನು ಕೊಟ್ಟು ಎದುರುದಾರರು ಶರ್ಟನ್ನು ಬಿಚ್ಚಿಸಿಕೊಂಡು ಸದರಿ ಶರ್ಟಿನ ಮುಂಭಾಗದ ಎಡಭಾಗದ ಜೇಬನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿದ್ದರಿಂದ ಸದರಿ ದ್ರಾವಣಗಳನ್ನು ಹಾಗೂ ಶರ್ಟನ್ನು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ವಹಿಸಿಕೊಡುವ ಪಂಚನಾಮೆ ಕಾಲದಲ್ಲಿ ಎದುರುದಾರರನ್ನು ಭೇಟಿಯಾದಾಗ ನಿಮ್ಮಿಬ್ಬರ ಮಧ್ಯೆ ನಡೆದಿರುವ ಸಂಭಾಷಣೆಯನ್ನು ರೆಕಾರ್ಡ ಮಾಡಿಕೊಳ್ಳಲು ತಿಳಿಸಿದ್ದ ಮೊಬೈಲ್‌ನ್ನು ಹಾಜರುಪಡಿಸಲು ಹೇಳಿದಾಗ ದೂರುದಾರರು ಅದನ್ನು ಹಾಜರುಪಡಿಸಿರುತ್ತಾರೆ. ಮೊಬೈಲ್‌ನಲ್ಲಿ ರೆಕಾರ್ಡ್ ಆಗಿರುವ ವಾಯ್ಸ್ ಕ್ಲೀಪಿಂಗ್‌ನ್ನು ಡಾಟಾ ಕೇಬಲ್ ಮೂಲಕ ಕಂಪ್ಯೂಟರಿಗೆ ಹಾಕಿಸಿ ಆನ್ ಮಾಡಿ ಪಂಚರಿಗೆ ಕೇಳಿಸಿ ಕಂಪ್ಯೂಟರ್ ಮೂಲಕ ಎರಡು ಖಾಲಿ ಸಿ.ಡಿ.ಗಳಿಗೆ ಡೌನ್ ಲೋಡ್ ಮಾಡಿಕೊಂಡು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ. ನೆರಳು ಸಾಕ್ಷಿದಾರರು ಸದರಿ ಘಟನೆಯನ್ನು ವೀಕ್ಷಿಸಿರುವುದಾಗಿ ತನಿಖಾಧಿಕಾರಿಯವರ ಮುಂದೆ ಹೇಳಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ಸಮಜಾಯಿಷಿಯನ್ನು ಬರೆದುಕೊಡುವಂತೆ ತಿಳಿಸಿದಾಗ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ 2017-18 ನೇ ಸಾಲಿನ ಸ್ಪ್ರಿಂಕ್ಲರ್ ಅಳವಡಿಸಿದ್ದ ಸುಶೀಲಮ್ಮ ಕೋಂ ಸೀತಾರಾಮ್, ಅಂತರಗಂಗೆ ಇವರು ಚೆಕ್ಕನ್ನು ಪಡೆಯ ಬೇಕಾದ ಸಮಯದಲ್ಲಿ ನನಗೆ 2,500/- ರೂ. ಹಣ

ಕೊಟ್ಟಿರುತ್ತಾರೆ ಎಂದು ಒಪ್ಪಿಕೊಂಡಿರುತ್ತಾರೆ. ಎದುರುದಾರರು ನೀಡಿದ ಲಿಖಿತ ಸಮಜಾಯಿಷಿ ಬಗ್ಗೆ ತನಿಖಾಧಿಕಾರಿಗಳು ದೂರುದಾರರನ್ನು ಕೇಳಿದಾಗ ದೂರುದಾರು ಎದುರುದಾರರು ಮೇಲಿನ ಅಧಿಕಾರಿಗಳಿಗೆ ಕೊಡಬೇಕೆಂದು ತಮ್ಮ ಬಳಿ ಹಣ ಕೇಳಿರುತ್ತಾರೆ. ಆದರೆ ಈಗ ಆ ವಿಚಾರದ ಬಗ್ಗೆ ಯಾವುದೇ ಮಾಹಿತಿ ಕೊಡದೆ ವಿಚಾರವನ್ನು ಮರೆ ಮಾಚಿರುತ್ತಾರೆ ಎಂದು ಹೇಳಿ ಎದುರುದಾರರು ನೀಡಿದ ಹೇಳಿಕೆ ಸುಳ್ಳಾಗಿರುತ್ತದೆ ಎಂದು ನುಡಿದಿರುತ್ತಾರೆ.

6. ಸದರಿ ಹಣದ ಬಗ್ಗೆ ತನಿಖಾಧಿಕಾರಿಯವರು ಎದುರುದಾರರಿಗೆ ವಿಚಾರಿಸಿದಾಗ ಎದುರುದಾರರು ಸುಶೀಲಮ್ಮ ಕೋಂ ಸೀತಾರಾಮ್, ಅಂತರಗಂಗೆ ಇವರು ಚೆಕ್ಕನ್ನು ಪಡೆಯ ಬೇಕಾದ ಸಮಯದಲ್ಲಿ ತನಗೆ 2,500/- ರೂ. ಹಣ ಕೊಟ್ಟಿರುತ್ತಾರೆ ಎಂದು ಒಪ್ಪಿಕೊಂಡಿರುತ್ತಾರೆ.
7. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.
8. ಧ್ವನಿ ವಿಶ್ಲೇಷಣಾ ವರದಿಯಲ್ಲಿ ಮುದ್ರಿತ ಧ್ವನಿಯು ನಿಮ್ಮ ಧ್ವನಿಯೊಂದಿಗೆ ತಾಳೆಯಾಗಿರುವುದು ಧೃಢಪಟ್ಟಿರುತ್ತದೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ಧೃಢಪಟ್ಟಿರುತ್ತದೆ.
9. ನಂತರ ಎದುರುದಾರರಿಗೆ ದಿ; 26-08-2021 ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರು ತಮ್ಮ ಸಮಜಾಯಿಷಿಗಳನ್ನು ದಿನಾಂಕ 18/10/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಗಳನ್ನು ಪರಿಶೀಲಿಸಲಾಗಿ ಎದುರುದಾರರು ತಾನು ದೂರುದಾರರಿಂದ ಯಾವುದೇ ಲಂಚದ ಹಣವನ್ನು ಕೇಳಿರುವುದಿಲ್ಲ ಹಾಗೂ ಕೇಳಿ ಪಡೆದುಕೊಂಡಿರುವುದಿಲ್ಲ. ಎಸಿಬಿ ಅಧಿಕಾರಿಗಳು ದಿ: 10/08/2018 ರಂದು ನನ್ನ ಬಳಿ ಯಾವುದೇ ಲಂಚದ ಹಣವನ್ನು ವಶಪಡಿಸಿಕೊಂಡಿರುವುದಿಲ್ಲ ಎಂದು ಹೇಳಿ ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು

ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡು ಬರುವುದಿಲ್ಲ.

10. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ದೂರುದಾರರ ತಾಯಿ ಸುಶೀಲಮ್ಮ ರವರ ಹೆಸರಿನಲ್ಲಿ ಸರ್ವೆ ನಂ. 39, 39/2 ಪಿ ರಲ್ಲಿನ 1 ಎಕರೆ 30 ಗುಂಟೆ ಜಮೀನಿನಲ್ಲಿರುವ ಅಡಿಕೆ ಮತ್ತು ತೆಂಗಿನ ತೋಟಕಕ್ಕೆ ಸ್ಪಿಂಕ್ಲರ್ ಅಳವಡಿಸಿರುವ ತುಂತುರು ನೀರಾವರಿ ಯೋಜನೆಯಡಿಯಲ್ಲಿ ಸರ್ಕಾರದ ಸಹಾಯಧನ ಮಂಜೂರಾತಿಗಾಗಿ ತೋಟಗಾರಿಕೆ ಇಲಾಖೆಗೆ ಅರ್ಜಿ ಸಲ್ಲಿಸಿ ಎಲ್ಲಾ ದಾಖಲಾತಿಯನ್ನು ನೀಡಿದ್ದು, ಜಮೀನಿನ ಎಲ್ಲಾ ಕೆಲಸ ಮುಗಿದ ನಂತರ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಜಮೀನಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ಹೋಗಿರುತ್ತಾರೆ. ನಂತರ ದಿ: 08-08-2018 ರಂದು ದೂರುದಾರರ ಸ್ನೇಹಿತರಾದ ಶಿವಾನಂದರವರು ದೂರುದಾರರಿಗೆ ಪೋನ್ ಮಾಡಿ ತೋಟಗಾರಿಕೆ ಇಲಾಖೆಯಿಂದ ಸಬ್ಸಿಡಿ ಹಣ ರೂ. 24,050/- ಗಳು ಮಂಜೂರಾಗಿದ್ದು, ಹಣ ಪಡೆಯಲು 10% ಹಣವನ್ನು ಅವರಿಗೆ ಕೊಡಬೇಕೆಂದು ತಿಳಿಸಿದಾಗ ದೂರುದಾರರು ಅದೇ ದಿನ ತೋಟಗಾರಿಕೆ ಇಲಾಖೆಯ ಅಧಿಕಾರಿಯಾದ ಎದುರುದಾರರಿಗೆ ಫೋನ್ ಮಾಡಿ ವಿಚಾರಿಸಿದಾಗ ಎದುರುದಾರರು ನಾಳೆ ಬೆಳ್ಳಗೆ 10.00 ಗಂಟೆಗೆ ಬರಲು ತಿಳಿಸಿದ್ದರಿಂದ ದೂರುದಾರರು ದಿ: 09-08-2018 ರಂದು ಮಧ್ಯಾಹ್ನ 2.30 ಗಂಟೆಗೆ ಎದುರುದಾರರಿಗೆ ಫೋನ್ ಮಾಡಿದಾಗ ಎದುರುದಾರರು ಪಾಸ್‌ಬುಕ್ ಝೆರಾಕ್ಸ್ ಮತ್ತು ರೂ. 3,000/- ಲಂಚದ ಹಣವನ್ನು ತೆಗೆದುಕೊಂಡು ಬರುವಂತೆ ತಿಳಿಸಿದ್ದನ್ನು ದೂರುದಾರರು ತಮ್ಮ ಮೊಬೈಲ್ ನಲ್ಲಿ ರೆಕಾರ್ಡ ಮಾಡಿಕೊಂಡಿರುತ್ತಾರೆ. ನಂತರ ದಿ: 10-08-2018 ರಂದು ಮಧ್ಯಾಹ್ನ 2.15 ಗಂಟೆ ಸಮಯದಲ್ಲಿ ಎದುರುದಾರರು ದೂರುದಾರರಿಂದ ರೂ. 2,500/- ಗಳ ಲಂಚದ ಹಣವನ್ನು ಕೇಳಿ ತಮ್ಮ ಬಲಗೈಯಲ್ಲಿ ಪಡೆದು ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ಧೆ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು

1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

11. ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ ಶ್ರೀ ನಂಜೇಗೌಡ ಬಿನ್ ಲೇಟ್ ಅರಿವೇಗೌಡ, ಸಹಾಯಕ ತೋಟಗಾರಿಕೆ ಅಧಿಕಾರಿ, ಕೂಡ್ಲಿಗೆರೆ ಹೋಬಳಿ, ಭದ್ರಾವತಿ, ಶಿವಮೊಗ್ಗ ಜಿಲ್ಲೆ ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

9/3/22

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.